ಊ) ಕಳೆದ ಹತ್ತು ವರ್ಷಗಳಲ್ಲಿ ಆಯೋಜಿಸಿದ್ದ ಹೆಚ್ಚುವರಿ ಪರಿವರ್ತಕಗಳನ್ನು ಮೇಲೆ ತಿಳಿಸಿದ ಕಾರಣಗಳಿಂದಾಗಿ ಅಳವಡಿಸಲಾಗದೆ. ಇದರಿಂದ ವಿಫಲವಾದ ಪರಿವರ್ತಕಗಳ ಒಟ್ಟು ಸಂಖ್ಯೆ 43.

ಊ) ವಿಫಲವಾದ ಪರಿವರ್ತಕಗಳನ್ನು ಏಳು ದಿನಗಳೊಳಗೆ ಬದಲಾಯಿಸಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

ಋ) ಸದರಿ ತಾಲ್ಲೂಕಿಗೆ ವಿದ್ಯುತ್ ಸರಬರಾಜು ಮಾಡುತ್ತಿರುವ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯು ವಿಫಲಗೊಂಡ ಪರಿವರ್ತಕಗಳನ್ನು ದುರಸ್ತಿಗೊಳಿಸಲು ತುಮಕೂರು ಮತ್ತು ಮಧುಗಿರಿಯಲ್ಲಿ ಹಾಲಿ ಕೆಲಸ ನಿರ್ವಹಿಸುತ್ತಿರುವ ಎರಡು ಪರಿವರ್ತಕ ದುರಸ್ತಿ ಕೇಂದ್ರಗಳ ಜೊತೆಗೆ ತಿಪಟೂರಿನಲ್ಲಿ ಒಂದು ಪರಿವರ್ತಕ ದುರಸ್ತಿ ಕೇಂದ್ರವನ್ನು ತೆರೆಯಲು ಕ್ರಮ ತೆಗೆದು ಕೊಂಡಿದ್ದು ಅದು ಸಧ್ಯದಲ್ಲಿಯೇ ಕಾರ್ಯಾರಂಭ ಮಾಡಲಿದೆ. ಇದರಿಂದಾಗಿ ವಿಫಲವಾದ ಪರಿವರ್ತಕಗಳನ್ನು ಶೀಘ್ರವಾಗಿ ದುರಸ್ತಿಗೊಳಿಸಲು ಮತ್ತು ಬದಲಾಯಿಸಲು ಸಾಧ್ಯವಾಗುತ್ತದೆ.

ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಜೆ.ಸಿ ಮಾಧುಸ್ವಾಮಿ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1045 ಕ್ಕೆ ಅನುಬಂಧ

1994-95 ರಿಂದ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಗುರುತಿಸಿ ಕಾರ್ಯಾದೇಶ ನೀಡಿರುವ ಟಿ.ಸಿ.ಗಳ ವರ್ಷವಾರು ವಿವರ

ಕ್ರಮ ಸಂಖ್ಯೆ	ಅವಧಿ	ಗುರುತಿಸಿ ಕಾರ್ಯಾದೇಶ ನೀಡಿರುವ ಟಿ.ಸಿ.ಗಳ ಸಂಖ್ಯೆ
1	1994-95	55
2	1995-96	47
3	1996-97	44
4	1997-98	46
5	1998-99	38
6	1999-2000	91
7	2000-01	104
8	2001-02	64
9	2002-03	48
10	2003-04	32
11	2004-05	43
	ಒಟ್ಟು	**612**

770(1047) ಶ್ರೀ ಮಾಧುಸ್ವಾಮಿ ಜೆ.ಸಿ(ಚಿಕ್ಕನಾಯಕನ ಹಳ್ಳಿ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಚಿಕ್ಕನಾಯಕನ ಹಳ್ಳಿ ತಾಲ್ಲೂಕು ಒಂದು ಬಿಳಿ ತಾಲ್ಲೂಕು ಆಗಿದ್ದು ಅಲ್ಲಿ ರೈತರ ನೀರಾವರಿ ಪಂಪುಸೆಟ್‌ಗಳಿಗೆ ವಿದ್ಯುತ್ ಸರಬರಾಜು ಮಾಡಲು 1994-95 ರಿಂದ ಈವರೆಗೆ ಇಲಾಖೆ ನಿಗಧಿಪಡಿಸಿದ ಗುರಿ ಎಷ್ಟು :

ಆ) ಈವರೆಗೆ ಸಾಧಿಸಿರುವ ಗುರಿ ಎಷ್ಟು ;

ಇ) ಅದರಲ್ಲಿ ಸಾಮಗ್ರಿ ಕೊಟ್ಟು ಮಾಡಿಸಿರುವ ಸಂಖ್ಯೆ ಎಷ್ಟು ;

ಈ) ಸರ್ವೀಸ್ ಮ್ಯಾನ್ ಎಂದು ಪರಿಗಣಿಸಿ ಸಂಪರ್ಕ ಕಲ್ಪಿಸಿರುವ ಸಂಖ್ಯೆ ಎಷ್ಟು ;

ಉ) ಅಲ್ಲಿಂದ ಈವರೆಗೆ ಉಳಿದಿರುವ ನೋಂದಾಯಿತ ಹಾಗೂ ವರ್ಕ್ ಆರ್ಡರ್ ಆದ ನೀರಾವರಿ ಬಾವಿಗಳ ಸಂಖ್ಯೆ ಎಷ್ಟು ;

ಊ) ಇವುಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಸರ್ಕಾರ ಮಾಡಿರುವ ಕ್ರಮವೇನು :

ಋ) ಈ ಅನ್ಯಾಯವನ್ನು ಯಾವಾಗ ಸರಿಪಡಿಸುವಿರಿ ?

ಶ್ರೀ ಹೆಚ್.ಡಿ. ರೇವಣ್ಣ(ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) 1994–95ರ ಇಸವಿಯಿಂದ ಈವರೆಗೆ 5157 ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸರಬರಾಜು ಮಾಡಲು ಗುರಿ ನಿಗದಿಪಡಿಸಲಾಗಿತ್ತು.

ಆ) ಈವರೆಗೆ 4622 ನೀರಾವರಿ ಪಂಪುಸೆಟ್ಟುಗಳಿಗೆ ನಿದ್ಯುತ್ ಸಂಪರ್ಕ ನೀಡಲಾಗಿದೆ.

ಇ) 4622 ನೀರಾವರಿ ಪಂಪುಸೆಟ್ಟುಗಳ ಪೈಕಿ, 2611 ನೀರಾವರಿ ಪಂಪುಸೆಟ್ಟುಗಳಿಗೆ ಸಾಮಗ್ರಿಗಳನ್ನು ನೀಡಿ ವಿದ್ಯುತ್ ಸಂಪರ್ಕ ಒದಗಿಸಲಾಗಿದೆ.

ಈ) 2011 ನೀರಾವರಿ ಪಂಪುಸೆಟ್ಟುಗಳಿಗೆ ಸರ್ವಿಸ್ ಮ್ಯಾನ್ ಎಂದು ಪರಿಗಣಿಸಿ ವಿದ್ಯುತ್ ಸಂಪರ್ಕ ಒದಗಿಸಲಾಗಿದೆ.

ಉ) 1994–95 ರಿಂದ ಈವರೆಗೆ ಉಳಿದಿರುವ ನೋಂದಾಯಿತ ಹಾಗೂ ವರ್ಕ್ ಆರ್ಡರ್ ಆದ ನೀರಾವರಿ ಬಾವಿಗಳು 972.

ಊ) ಕಾರ್ಯಾದೇಶವಾದ 972 ಬಾವಿಗಳ ಕಾಮಗಾರಿ ಪೈಕಿ. 194ರ ಕಾಮಗಾರಿ ಪ್ರಗತಿಯಲ್ಲಿದೆ. ಬಾಕಿ ಉಳಿದ 778 ಕಾಮಗಾರಿಯನ್ನು ಜ್ಯೇಷ್ಠತೆ ಮತ್ತು ಸಾಮಗ್ರಿ ಲಭ್ಯತೆಯ ಮೇಲೆ ತೆಗೆದುಕೊಂಡು ಶೀಘ್ರವಾಗಿ ಪೂರ್ಣ ಮಾಡಲಾಗುವುದು .

ಋ) ಮುಂದಿನ 6 ತಿಂಗಳಲ್ಲಿ ಬಾಕಿ ಉಳಿದಿರುವ 778 ಕಾಮಗಾರಿಯನ್ನು ಪೂರ್ಣಮಾಡಲಾಗುವುದು.

771(1000) ಶ್ರೀ ಮಹದೇವ (ಕೃಷ್ಣರಾಜನಗರ) : ಮಾನ್ಯ ಲೋಕೋಪಯೋಗಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಶಿಥಿಲಗೊಂಡ ಆಸ್ಪತ್ರೆಗಳ ಕಟ್ಟಡಗಳನ್ನು ದುರಸ್ತಿಗೊಳಿಸಿ ನರ್ಸ್ ಮತ್ತು ವೈದ್ಯರ ಕೊಠಡಿಗಳನ್ನು ನವೀಕರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು :

ಆ) ಆಸ್ಪತ್ರೆಗಳ ಸಿಬ್ಬಂದಿ ಹಾಗೂ ವೈದ್ಯರುಗಳ ಸರ್ಕಾರಿ ವಸತಿಗೃಹಗಳನ್ನು ದುರಸ್ತಿಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಸಚಿವರು) :

ಅ) ಲೋಕೋಪಯೋಗಿ ಇಲಾಖೆಯಿಂದ ಆಸ್ಪತ್ರೆ ಕಟ್ಟಡಗಳ ನಿರ್ವಹಣೆ ಮತ್ತು ದುರಸ್ತಿ ಕಾರ್ಯಗಳನ್ನು ನಿರ್ವಹಿಸುತ್ತಿದ್ದು ನರ್ಸ್ ಮತ್ತು ವೈದ್ಯರ ಕೊಠಡಿಗಳನ್ನು ಸುಸ್ಥಿತಿಯಲ್ಲಿಡಲು ಕಾಲ ಕಾಲಕ್ಕೆ ಬಿಡುಗಡೆಯಾಗುವ ಅನುದಾನದ ಲಭ್ಯತೆ ಹಾಗೂ ಆಸ್ಪತ್ರೆ ಮುಖ್ಯಸ್ಥರ ಬೇಡಿಕೆಗಳನ್ನಾಧರಿಸಿ ಅಗತ್ಯತೆಗನುಗುಣವಾಗಿ ಸೂಕ್ತವಾಗಿ ನಿರ್ಧರಿಸಿ ನವೀಕರಣಗೊಳಿಸಲಾಗುತ್ತಿದೆ.